# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಖಾಸಗಿ ಕಟ್ಟಡಕ್ಕೆ ಬಾಡಿಗೆ ನಿಗಧಿಪಡಿಸಿ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:- ಪತ್ರ ಸಂಖ್ಯೆ:ಕವಶಿಸಸ/ಶಿಕ್ಷಣ/ಸಿಆರ್/150/2012-13, ದಿನಾಂಕ:13.09.2013 ಹಾಗೂ 21-12-2013.

*****

**ಪ್ರಸ್ತಾವನೆ:-**

ಮೇಲೆ ಓದಲಾದ ಪತ್ರಗಳಲ್ಲಿ 2009-10ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾರಂಭವಾದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಗುಬ್ಬಿ ಟೌನ್ ಇಲ್ಲಿ ನಡೆಯುತ್ತಿದ್ದು, ಸದರಿ ಕಟ್ಟಡವು ಗುಬ್ಬಿ ತಾಲ್ಲೂಕಿನ ಹೇರೂರು ಗ್ರಾಮದ ನೊಳಂಬ ವೀರಸೈವ ಸಂಘ(ರಿ), ಗೌರವ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ.ಚಂದ್ರಶೇಖರ್, ಇವರಿಗೆ ಸೇರಿದ ಬಾಡಿಗೆ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆಯವರು ಮಾಹೆಯಾನ ರೂ.56,900/-(ಐವತ್ತಾರು ಸಾವಿರದ ಒಂಬೈನೂರು ರೂಪಾಯಿಗಳು ಮಾತ್ರ)ಗಳಿಗೆ ಮಾಸಿಕ ಬಾಡಿಗೆಯನ್ನು ನಿಗಧಿಪಡಿಸಿದ್ದು, ದಿನಾಂಕ:01-07-2013ರಿಂದ ಪಾವತಿಸಲು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು, ಇವರು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

**ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.**

**ಸರ್ಕಾರಿ ಆದೇಶ ಸಂಖ್ಯೆ:ಸಕಇ 206 ಮೋದೇಶಾ 2013 ಬೆಂಗಳೂರು,**
**ದಿನಾಂಕ:24-03-2014.**

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ ಗುಬ್ಬಿ ತಾಲ್ಲೂಕಿನ ಹೇರೂರು ಗ್ರಾಮದ ನೊಳಂಬ ವೀರಶೈವ ಸಂಘ(ರಿ), ಗೌರವ ಕಾರ್ಯದರ್ಶಿಗಳಾದ ಶ್ರೀ.ಬಿ.ಕೆ.ಚಂದ್ರಶೇಖರ್, ಇವರ ಮಾಲೀಕತ್ವದ ಗುಬ್ಬಿ ಟೌನ್, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ, ಇಲ್ಲಿ ನಡೆಯುತ್ತಿರುವ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಖಾಸಗಿ ಕಟ್ಟಡಕ್ಕೆ ಲೋಕೋಪಯೋಗಿ ಇಲಾಖೆಯವರು ಮಾಹೆಯಾನ ನಿಗಧಿಪಡಿಸಿದ ರೂ.56,900/-(ಐವತ್ತಾರು ಸಾವಿರದ ಒಂಬೈನೂರು ರೂಪಾಯಿಗಳು ಮಾತ್ರ) ಬಾಡಿಗೆಯನ್ನು ದಿನಾಂಕ:01-07-2013ರಿಂದ ಪಾವತಿಸಲು ಹಾಗೂ ಬಾಡಿಗೆಯ ಅನುದಾನವನ್ನು ಲೆಕ್ಕ ಶೀರ್ಷಿಕೆ 2225-01-102-0-08 (ಕ್ರೋಢೀಕೃತ ನಿಧಿ) (ಯೋಜನೆ) ರಡಿಯಲ್ಲಿ ಅನ್ವಯಿಸುವಂತೆ ಆದಾಯ ತೆರಿಗೆಯನ್ನು TDS ಮುಖಾಂತರ ಶೇ.10ರಷ್ಟು ಮೊತ್ತ ಕೇಂದ್ರ ಸರ್ಕಾರದ ಲೆಕ್ಕಕ್ಕೆ ಜಮೆಗೊಳಿಸುವ ಷರತ್ತಿನೊಂದಿಗೆ ಕಟ್ಟಡದ ಮಾಲೀಕರಿಗೆ ಬಾಡಿಗೆ ಪಾವತಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂ:ಸಕಕಾ 242 ಆಂಆಸ 2013, ದಿನಾಂಕ:24-02-2014ರಲ್ಲಿ ನೀಡಿರುವ ಸಹಮತಿ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 1 ಟಿಎಫ್‌ಪಿ 2013, ದಿನಾಂಕ:10-05-2013ರಲ್ಲಿ ಸರ್ಕಾರದ ಇಲಾಖಾ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

24/03

(ವಿ.ರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಗೆ,

1. ಮಹಾಲೇಖಪಾಲರು,(ಎ ಮತ್ತು ಇ)(ಲೆಕ್ಕ ಪರಿಶೋಧನೆ-1) (ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು
2. ಜಿಲ್ಲಾಧಿಕಾರಿಗಳು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ,
3. ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ,
4. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
5. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಜಿಲ್ಲಾ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆ, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ,
7. ಖಜಾನಾಧಿಕಾರಿಗಳು, ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ,
8. ಶ್ರೀ.ಬಿ.ಕೆ.ಚಂದ್ರಶೇಖರ, ಗೌರವ ಕಾರ್ಯದರ್ಶಿ, ನೊಳಂಬ ವೀರಸೈವ ಸಂಘ(ರಿ), ಹೇರೂರು ಗ್ರಾಮ ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.